# ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 130 ಸಮನ್ವಯ 2016

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:26.12.2017.

## ಸುತ್ತೋಲೆ

ವಿಷಯ: ರಾಜ್ಯಾದ್ಯಂತ ಪುರಸಭೆ, ನಗರಸಭೆ, ನಗರ ಪ್ರಾಧಿಕಾರ ಮತ್ತು ಮಹಾ ನಗರ ಪಾಲಿಕೆಗಳಲ್ಲಿರುವ ವಕ್ಫ್ ಆಸ್ತಿಗಳ ಸಂರಕ್ಷಣೆಯ ಕುರಿತು.

ಉಲ್ಲೇಖ: ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಜ್ ಮತ್ತು ಔಖಾಫ್ ಇಲಾಖೆ, ವಿಕಾಸಸೌಧ, ಬೆಂಗಳೂರು ರವರ ಅ.ಸ. ಪತ್ರ ದಿನಾಂಕ 19-11-2016.

* * * * *

ರಾಜ್ಯದ ಪಟ್ಟಣ/ನಗರ ಪ್ರದೇಶದಲ್ಲಿರುವ ಹೆಚ್ಚಿನ ವಕ್ಫ್ ಆಸ್ತಿಗಳಿಗೆ ಖಾತೆಯಾಗದೇ ಇರುವುದರಿಂದ ವಕ್ಫ್ ಸಂಸ್ಥೆ ಮತ್ತು ವಕ್ಫ್ ಅಧಿಕಾರಿಗಳಿಂದ ಬಂದ ಅರ್ಜಿಗಳ ಆಧಾರ ಜಿಲ್ಲಾ ವಕ್ಫ್ ಅಧಿಕಾರಿಯಿಂದ ದೃಢೀಕರಿಸಲಾಗಿರುವ ನೊಂದಾಯಿತ ಪತ್ರ ಅಥವಾ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿರುವ ಪ್ರತಿಗಳನ್ನು ಸಲ್ಲಿಸಿದಲ್ಲಿ, ನಿಯಮಾನುಸಾರ ಪರಿಶೀಲಿಸಿ, ಆದ್ಯತೆಯ ಮೇಲೆ ಖಾತೆ ಬದಲಾವಣೆ ಮಾಡಿ, ನೀಡಲು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು/ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ಸೂಚಿಸಿದೆ.

ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಮತ್ತು ಎಲ್ಲಾ ಪ್ರಾಧಿಕಾರಗಳು ವಕ್ಫ್ ಆಸ್ತಿಯ ಮಾರಾಟ, ದಾನ, ಬದಲಾವಣೆ, ಭೋಗ್ಯ ಅಥವಾ ಹಸ್ತಾಂತರ ಸಾಧ್ಯವಿಲ್ಲವೆಂಬ ಅಂಶಗಳನ್ನು ಗಮನದಲ್ಲಿಟ್ಟು ಕೊಳ್ಳಲು ಸೂಚಿಸಿದೆ.

ನಗರಾಭಿವೃದ್ಧಿ ದೃಷ್ಟಿಯಿಂದ ಪ್ರಾಧಿಕಾರಗಳು ಬಡಾವಣೆಗಳಿಗೆ ಅನುಮತಿ ನೀಡುತ್ತಿದ್ದು, ಇಂತಹ ಬಡಾವಣೆಗಳಲ್ಲಿ ವಕ್ಫ್ ಆಸ್ತಿಗಳು ಬಂದಲ್ಲಿ ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಹಾಗೂ ಸ್ಥಳೀಯ ವಕ್ಫ್ ಸಂಸ್ಥೆಯ ಪೂರ್ವಾನುಮತಿ ಲಿಖಿತವಾಗಿ ಪಡೆಯತಕ್ಕದೆಂದು ಸೂಚಿಸಿದೆ ಹಾಗೂ ವಕ್ಫ್ ಸಂಸ್ಥೆಗಳು ಆಕ್ಷೇಪಣೆ ಸಲ್ಲಿಸಿದ್ದಲ್ಲಿ, ನಿಯಮಾನುಸಾರ ಸಂಬಂಧಿಸಿದವರನ್ನು ಸಮಾಲೋಚಿಸಿದ ನಂತರವೇ ಅಂತಿಮ ತೀರ್ಮಾನ ಕೈಗೊಳ್ಳಲು ಸೂಚಿಸಿದೆ.

ಅನೇಕ ನಗರಾಭಿವೃದ್ಧಿ ಕಾರ್ಯಗಳಿಗೆ ವಕ್ಫ್ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗುತ್ತಿದ್ದು, ವಕ್ಫ್ ಕಾಯ್ದೆಯ ಕಲಂ 51ರ ಅನುಸಾರ The Places of Worship (Special Provisions) Act, 1991 (42 of 1991)ರ ಪ್ರಾವುದಾನಗಳಿಗೆ ವ್ಯತಿರಿಕ್ತವಾಗದೇ ಇದ್ದಲ್ಲಿ ಮಾತ್ರ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಗೆ ಸಮಾಲೋಚಿಸದೇ ಭೂಸ್ವಾಧೀನಪಡಿಸುವುದು ಅನೂರ್ಜಿತವಾಗುವುದೆಂದಿದೆ. ಇಂತಹ ಸಂದರ್ಭದಲ್ಲಿ ಪರ್ಯಾಯ ಜಮೀನನ್ನು ನೀಡಲು ಹಾಗೂ ಜಮೀನು ಲಭ್ಯವಿಲ್ಲದಿದ್ದಲ್ಲಿ ಮಾತ್ರ ಮಾರುಕಟ್ಟೆ ಬೆಲೆಯ ಅನುಸಾರ ಗರಿಷ್ಠ ನಷ್ಟ ಭರ್ತಿ (Solatium) ಯೊಂದಿಗೆ ಮಂಜೂರಾತಿ ನೀಡಬೇಕೆಂದಿದೆ. ಆದ್ದರಿಂದ ಎಲ್ಲಾ ನಗರಾಭಿವೃದ್ಧಿ ಸಂಸ್ಥೆಗಳು ಈ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

..2.,

Scanned by CamScanner